**ಆದರ್ಶ್ ವಿಜಯಲಕ್ಷ್ಮಿ**
ಕಲೆ: ಆದಿತ್ಯ ಸದಾಶಿವ್

# ಚಂಪಾ ಪ್ರಸ್ಥಾನ



ಚಂಪಾಳಿಗೆ ಮೊನ್ನೆ ತಾನೇ ಹದಿನಾರು ತುಂಬಿತು. ಎಲ್ಲಾ ಹದಿನಾರರ ಹೆಣ್ಣುಮಕ್ಕಳಂತೆ ಅವಳು ಸುಂದರವಾಗಿದ್ದಳು. ಅವಳಮ್ಮ ಪುಟ್ಟಮ್ಮನ ಒತ್ತಾಯಕ್ಕೆ ಮಣಿದು ಎಣ್ಣೆ ಮೆತ್ತಿದ ಕಪ್ಪಗಿನ ದಪ್ಪ ಜಡೆ, ಉದ್ದನೆ ಮೂಗು, ಅಗಲವಾದ ಹಣೆ, ದುಂಡನೆಯ ಅಂದರೆ ಪೂರಾ ದುಂಡು ಮುಖವಲ್ಲ. ತೀರಾ ಕೋಲು ಮುಖವೂ ಅಲ್ಲ. ಅವಳಮ್ಮನ ಹಾಗೆ ಅವಳ ಅಂದ. ಅವಳು ನಕ್ಕರೆ ಅವಳ ಎಡಗೆನ್ನೆಯಲ್ಲಿ ಸಣ್ಣದೊಂದು ಗುಳಿ ಬೀಳುತ್ತಿತ್ತು. ಅವಳ ಕಣ್ಣು ಮಾತ್ರ ಅವಳಪ್ಪ ದೇವಾ ಕುಮಾರನ ಹಾಗೆ ಸಣ್ಣಗೆ. ಅವಳು ಜೋರಾಗಿ ನಕ್ಕರೂ, ಅತ್ತರೂ, ಕಣ್ಣುಗಳು ತೆರೆದಿದ್ದರೂ ಮುಚ್ಚಿದಂತೆ ಕಾಣುತ್ತಿದ್ದವು. ಅವಳ ಅಪ್ಪನಿಗೆ ಸಂಪಿಗೆ ಹೂವೆಂದರೆ ಪ್ರೀತಿ. ಮಗಳು ಹುಟ್ಟಿದಾಗ ಸಂಪಿಗೆ ಅಂತ ಹೆಸರಿಡಬೇಕು ಅಂತ ನಿಶ್ಚಯಿಸಿದ್ದ. 'ಸಂಪಿಗೆ ತುಂಬಾ ಹಳೇ ಹೆಸರಾಯಿತು. ನನ್ನ ಮಗಳ ಹೆಸರು ಹೊಸದಾಗಿರಬೇಕು. ಚಂಪಾ ಅಂತ ಯಾಕೆ ಇಡಬಾರದು, ಚಂಪಾ ಅಂದರೆ ಸಂಪಿಗೆ ತಾನೆ' ಎಂದು ಅವಳಮ್ಮ ಕೊಟ್ಟ ಸೂಚನೆ ಎಲ್ಲರಿಗೂ ಇಷ್ಟವಾಗಿತ್ತು.

ಕೆಲವು ವರ್ಷಗಳ ಹಿಂದೆ ಸ್ಲಂ ಇದ್ದ ಜಾಗದಲ್ಲಿ ಸರ್ಕಾರ ನೂರಾರು ಮನೆಗಳನ್ನು ಕಟ್ಟಿಸಿತ್ತು. ಚಂಪಾಳ ಅಪ್ಪ ಅಲ್ಲಿನ ಎಂಎಲ್‌ಎ ಮತ್ತವನ ಚೇಲಗಳ ಕೈ ಕಾಲು ಹಿಡಿದು, ಬಿಟ್ಟಿ ಹೂವಿನ ವರ್ತನೆ ಕೊಟ್ಟು, ಅದರ ಮೇಲೆ ಒಂದೊಂದಕ್ಕೂ ಐವತ್ತು ಅರವತ್ತು ಸಾವಿರ ಅವರ ಜೇಬಿಗೆ ತುರುಕಿ, ಅವನ ಹೆಸರಲ್ಲಿ, ಹೆಂಡತಿಯ ಹೆಸರಲ್ಲಿ ತಲಾ ಒಂದೊಂದು ಸರ್ಕಾರೀ ಲೆಕ್ಕದ ಉಚಿತ ಮನೆಗಳನ್ನು ಸಂಪಾದಿಸಿದ್ದ. ಒಂದನ್ನು ಬಾಡಿಗೆಗೆ ಕೊಡಲಾಗಿತ್ತು. ಅಷ್ಟೆಲ್ಲ ಕಷ್ಟಪಟ್ಟು ತೆಗೆದುಕೊಂಡ ಮನೆ ವರ್ಷ ತುಂಬುವುದರೊಳಗೆ ಬಣ್ಣ ಮಾಸಿ, ಬಚ್ಚಲಿನ ಟೈಲುಗಳೆದ್ದು, ಮಳೆಬಂದಾಗ ಗೋಡೆಯಲ್ಲೆಲ್ಲ